# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 589 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-07-2023 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಎಷ್ಟು ಮಹಾನಗರ ಪಾಲಿಕೆಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲಾಗಿದೆ (ಸ್ಮಾರ್ಟ್ ಸಿಟಿ ನಗರವಾರು ವಿವರ ನೀಡುವುದು)</td><td>ಸ್ಮಾರ್ಟ್ ಸಿಟಿ ಯೋಜನೆಯಡಿ ಪಿ.ಪಿ.ಪಿ. ಮಾದರಿಯಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಯೋಜನೆಯಡಿ ಸಾಂಪ್ರದಾಯಿಕ ಬೀದಿ ದೀಪಗಳನ್ನು ಎಲ್.ಇ.ಡಿ ಬೀದಿ ದೀಪಗಳನ್ನಾಗಿ 8 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಿದ ನಂತರ 7 ವರ್ಷಗಳ ಕಾರ್ಯಚರಣೆ ಹಾಗೂ ನಿರ್ವಹಣೆ ಒಳಗೊಂಡಿರುತ್ತದೆ. ಎಲ್.ಇ.ಡಿ ಬೀದಿ ದೀಪಗಳ ಅನುಷ್ಠಾನದಿಂದ ಉಂಟಾಗುವ ವಿದ್ಯುತ್ ಬಿಲ್ಲಿನ ಉಳಿತಾಯದಲ್ಲಿ ರಿಯಾಯತಿದಾರರಿಗೆ ನಿರ್ವಹಣೆ ಮತ್ತು ಕಾರ್ಯಚರಣೆ ಅವಧಿಯಲ್ಲಿ ಪ್ರತಿ ತಿಂಗಳಿಗೆ ಒಮ್ಮೆ ಅಂಗೀಕರಿಸಿದ ದರದಂತೆ ಹಣ ಪಾವತಿ ಮಾಡಲಾಗುವುದು.<br><br>ಎಲ್.ಇ.ಡಿ. ಯೋಜನೆಯ ಬಗ್ಗೆ ಸ್ಮಾರ್ಟ್ ಸಿಟಿ ನಗರವಾರು ವಿವರಗಳು ಈ ಕೆಳಕಂಡಂತೆ ಇವೆ:<br><br>
<table>
<tr><th rowspan="2">ಸಂ</th><th rowspan="2">ನಗರ</th><th colspan="3">ಎಲ್.ಇ.ಡಿ ಬೀದಿ ದೀಪಗಳು</th><th colspan="3">ಸಿ.ಸಿ.ಎಂ.ಎಸ್ ಪ್ಯಾನಲ್ ಗಳು</th><th rowspan="2">ಷರಾ</th></tr>
<tr><th>ಗುರಿ</th><th>ಸಾಧನೆ</th><th>ಬಾಕಿ</th><th>ಗುರಿ</th><th>ಸಾಧನೆ</th><th>ಬಾಕಿ</th></tr>
<tr><td>1</td><td>ತುಮಕೂರು</td><td>32,798</td><td>32,798</td><td>0</td><td>1,042</td><td>1,042</td><td>0</td><td>ಪೂರ್ಣಗೊಂಡಿದ್ದು ನಿರ್ವಹಣೆಯು ಪ್ರಗತಿಯಲ್ಲಿರುತ್ತದೆ.</td></tr>
<tr><td>2</td><td>ದಾವಣಗೆರೆ</td><td>22,798</td><td>22,798</td><td>0</td><td>1,416</td><td>1,416</td><td>0</td><td>ನಿರ್ವಹಣೆಗಾಗಿ ಅಂತಿಮ ಪರಿಶೀಲನೆಯಲ್ಲಿದೆ.</td></tr>
<tr><td>3</td><td>ಬೆಳಗಾವಿ</td><td>32,864</td><td>23,781</td><td>9,083</td><td>1,126</td><td>609</td><td>517</td><td rowspan="3">ಅಳವಡಿಕೆ ಪ್ರಗತಿಯಲ್ಲಿರುತ್ತದೆ</td></tr>
<tr><td>4</td><td>ಮಂಗಳೂರು</td><td>60,458</td><td>16,392</td><td>44,066</td><td>2,559</td><td>0</td><td>2,559</td></tr>
<tr><td>5</td><td>ಶಿವಮೊಗ್ಗ</td><td>18,502</td><td>18,502</td><td>0</td><td>1,081</td><td>770</td><td>311</td></tr>
</table>
</td></tr>
<tr><td>ಆ</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್.ಇ.ಡಿ ಬೀದಿ ದೀಪ ಅಳವಡಿಸುವ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ಈವರೆಗೆ ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ,</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ ಇ.ಡಿ ಅಳವಡಿಸುವ ಯೋಜನೆಯನ್ನು ಖಾಸಗಿ - ಸಾರ್ವಜನಿಕ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸ್ಮಾರ್ಟ್ ಸಿಟಿ ಯೋಜನೆಯಡಿ ಯಾವುದೇ ಅನುದಾನ ನಿಗಧಿಪಡಿಸಿರುವುದಿಲ್ಲ.<br><br>ಸದರಿ ಕಾಮಗಾರಿಗೆ ಒಂದೇ ಪ್ಯಾಕೇಜ್ ಅಡಿಯಲ್ಲಿ ಕಾರ್ಯಾದೇಶವನ್ನು ನೀಡಿ ದಿನಾಂಕ:24.02.2021ರಲ್ಲಿ ಒಪ್ಪಂದ</td></tr>
</table>

<table>
<tr>
<td></td>
<td>ಅನುಮೋದನೆಯಾದ ಟೆಂಡರ್ ಮೊತ್ತವೆಷ್ಟು; ಎಷ್ಟು ಕಾಮಗಾರಿಗಳಿಗೆ ಕಾಮಗಾರಿ ಆದೇಶ ನೀಡಲಾಗಿದೆ. ಕಾಮಗಾರಿ ಗುತ್ತಿಗೆ ಪಡೆದ ಸಂಸ್ಥೆಗಳಾವುವು; (ವಾರ್ಡುವಾರು ಸಂಪೂರ್ಣ ವಿವರ ನೀಡುವುದು)</td>
<td>ಮಾಡಲಾಗಿರುತ್ತದೆ. ಕರಾರು ಒಪ್ಪಂದದ ದಿನಾಂಕದಿಂದ 08 ತಿಂಗಳ ಒಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಅನುಮೋದನೆಯಾದ ಟೆಂಡರ್ ಮೊತ್ತ ಪ್ರತಿ ತಿಂಗಳಿಗೆ ರೂ.79,49,001/- ರಂತೆ ಒಟ್ಟು 7 ವರ್ಷದ ಅವಧಿಗೆ ಒಟ್ಟು ರೂ.66.77 ಕೋಟಿಗಳಾಗಿರುತ್ತದೆ. (ಜಿ.ಎಸ್.ಟಿ ಹೊರತುಪಡಿಸಿ).<br><br>ಕಾಮಗಾರಿ ಗುತ್ತಿಗೆ ಪಡೆದ ರಿಯಾಯಿತಿದಾರರು:- M/s. Chaturbahave Electronics Business Solutions Pvt. Ltd., M/s. Crompton Greaves Consumer Electrical Ltd. ಮತ್ತು M/s. Annapurna Enterprises.</td>
</tr>
<tr>
<td>ಇ</td>
<td>ಈ ಕಾಮಗಾರಿಗಳ ಕರಾರು ಅವಧಿಯೆಷ್ಟು ಮುಕ್ತಾಯಗೊಂಡ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳೆಷ್ಟು, ಪ್ರಾರಂಭಗೊಳ್ಳದ ಕಾಮಗಾರಿಗಳೆಷ್ಟು, ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು (ವಾರ್ಡುವಾರು ಸಂಪೂರ್ಣ ವಿವರ ನೀಡುವುದು)</td>
<td>ಪ್ರಸ್ತುತ ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್.ಇ.ಡಿ ಬೀದಿ ದೀಪಗಳ ಅಳವಡಿಕೆ ಕಾಮಗಾರಿಯ ಪ್ರಗತಿಯು ಈ ಕೆಳಕಂಡಂತೆ ಇರುತ್ತದೆ.
<table>
<tr><th colspan="3">ಎಲ್.ಇ.ಡಿ ಬೀದಿ ದೀಪಗಳು</th><th colspan="3">ಸಿ.ಸಿ.ಎಂ.ಎಸ್ ಪ್ಯಾನಲ್ ಗಳು</th></tr>
<tr><th>ಗುರಿ</th><th>ಸಾಧನೆ</th><th>ಬಾಕಿ</th><th>ಗುರಿ</th><th>ಸಾಧನೆ</th><th>ಬಾಕಿ</th></tr>
<tr><td>60,458</td><td>16,392</td><td>44,066</td><td>2,559</td><td>0</td><td>2,559</td></tr>
</table>
ವಾರ್ಡ್ ವಾರು ಕಾಮಗಾರಿಯ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td>
</tr>
<tr>
<td>ಈ</td>
<td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್.ಇ.ಡಿ ಬೀದಿ ದೀಪ ಅಳವಡಿಸುವ ಟೆಂಡರ್ ಅವಧಿಯನ್ನು ಯಾವ ಕಾರಣಗಳಿಗಾಗಿ ಎಷ್ಟು ಸಲ ವಿಸ್ತರಿಲಾಗಿದೆ; ಎಲ್.ಇ.ಡಿ ಬೀದಿ ದೀಪ ಅಳವಡಿಸುವ ಟೆಂಡರ್ ಅವಧಿಯನ್ನು ವಿಸ್ತರಿಸಿದ್ದರೂ ಬೀದಿ ದೀಪ ಅಳವಡಿಸುವ ಕಾಮಗಾರಿ ಪೂರ್ಣವಾಗದಿರಲು ಕಾರಣಗಳೇನು; ಸದರಿ ಕಾಮಗಾರಿಗೆ ಮರುಟೆಂಡರ್ ಮಾಡಲಾಗುವುದೇ; ಮಾಡುವುದಾದರೆ ಈಗಾಗಲೇ ಅಳವಡಿಸಿರುವ ಬೀದಿ ದೀಪಗಳ ನಿರ್ವಹಣೆ ಹೇಗೆ ಮಾಡಲಾಗುವುದು; (ವಿವರ ನೀಡುವುದು)</td>
<td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್.ಇ.ಡಿ. ಬೀದಿ ದೀಪಗಳ ಕಾಮಗಾರಿಯ ಟೆಂಡರ್ ಅವಧಿಯಲ್ಲಿ ಒಟ್ಟು ರೂ.6,67,71,608/-ಗಳ ದಂಡವನ್ನು ವಿಧಿಸಿ, 02 ಭಾರಿ ಅವಧಿಯನ್ನು ವಿಸ್ತರಿಸಲಾಗಿರುತ್ತದೆ. ಮೊದಲು ವಿಸ್ತರಿಸಲಾದ ಅವಧಿಯು 24.10.2021 ರಿಂದ 30.11.2022ಗಳಾಗಿದ್ದು, ಎರಡನೆಯ ವಿಸ್ತರಿಸಲಾದ ಅವಧಿಯು 1.12.2022 ರಿಂದ 16.05.2023ರವರೆಗೆ ಆಗಿರುತ್ತದೆ. ಕಾಮಗಾರಿಯ ಗುತ್ತಿಗೆಯನ್ನು ಪಡೆದಿರುವ ರಿಯಾಯಿತಿದಾರರು ಆರ್ಥಿಕ ಸಮಸ್ಯೆ ಮತ್ತು ವಿಳಂಬ ನೀತಿಯಿಂದಾಗಿ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ.<br><br>ಸದರಿ ಕಾಮಗಾರಿಯನ್ನು ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಸ್ಮಾರ್ಟ್ ಸಿಟಿ ಯೋಜನೆಯಡಿ ಪಿ.ಪಿ.ಪಿ ಮಾದರಿಯಲ್ಲಿ ಟೆಂಡರ್ ಕರೆದು, ಮಂಗಳೂರು ಮಹಾನಗರ ಪಾಲಿಕೆ ಹಾಗೂ M/s.Chaturbahave Electronics Business Solutions Pvt. Ltd, M/s.Crompton Greaves Consumer Electrical Ltd. ಮತ್ತು M/s.Annapurna Enterprises ನಡುವೆ ಕರಾರು ಒಪ್ಪಂದವಾಗಿರುತ್ತದೆ ಕರಾರಿನಂತೆ ನಿಯಮಾನುಸಾರ ಕಾಮಗಾರಿಯನ್ನು ಸದರಿ ರಿಯಾಯಿತಿದಾರರಿಂದ ಮುಂದುವರೆಸುವ ಕುರಿತು ಅಥವಾ ರದ್ದು ಪಡಿಸುವ ಕುರಿತು ಮಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.</td>
</tr>
</table>

| | | |
|---|---|---|
| ಉ | ಈ ಕಾಮಗಾರಿಗಳಲ್ಲಿ ಹಣ ಪಾವತಿಸಲಾದ ಕಾಮಗಾರಿಗಳು ಯಾವುವು; ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ? (ವಾರ್ಡ್ ವಾರು ಸಂಪೂರ್ಣ ವಿವರ ನೀಡುವುದು) | ಸದರಿ ಕಾಮಗಾರಿಯು ಪಿ.ಪಿ.ಪಿ ಮಾದರಿಯಡಿ ಕೈಗೆತ್ತಿಕೊಳ್ಳಲಾಗಿರುವುದರಿಂದ ಈ ಸಂಬಂಧ ಕಾಮಗಾರಿಯು ಪೂರ್ಣಗೊಂಡ ನಂತರ ಪ್ರತಿ ತಿಂಗಳಿಗೆ ರೂ.79,49,001/-ರಂತೆ ಒಟ್ಟು 7 ವರ್ಷದ ಅವಧಿಗೆ ಒಟ್ಟು ರೂ.66.77 ಕೋಟಿಗಳು (ಜಿ.ಎಸ್.ಟಿ ಹೊರತುಪಡಿಸಿ) ಗುತ್ತಿಗೆದಾರರಿಗೆ ಪಾವತಿಸಬೇಕಿರುತ್ತದೆ. ಅದರಂತೆ, ಸದರಿ ಕಾಮಗಾರಿಯು ಇನ್ನೂ ಪೂರ್ಣಗೊಳ್ಳದ ಹಿನ್ನಲೆಯಲ್ಲಿ ಈವರೆಗೆ ಯಾವುದೇ ಮೊತ್ತವನ್ನು ರಿಯಾಯಿತಿದಾರರಿಗೆ ಪಾವತಿಸಿರುವುದಿಲ್ಲ.<br><br>ವಾರ್ಡ್ ವಾರು ಕಾಮಗಾರಿಯ ಪ್ರಗತಿಯ ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ. |

**ಸಂಖ್ಯೆ**:ನಅಇ 98 ಸಿಎಸ್ಎಸ್ 2023

13/07/2023

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ - 1

# ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್.ಇ.ಡಿ. ಬೀದಿ ದೀಪ ಕಾಮಗಾರಿಯ ವಾರ್ಡ್ ವಾರು ವಿವರಗಳು

| Zone | Ward No. | No.of LED street lights installed |
|---|---|---|
| 1 | 1 | 415 |
| | 2 | 957 |
| | 3 | 635 |
| | 4 | 411 |
| | 5 | 191 |
| | 6 | 349 |
| | 7 | 1169 |
| | 8 | 917 |
| | 9 | 855 |
| | 10 | 829 |
| | 11 | 654 |
| | 60 | 734 |
| | NH 66 Suratkal flyover to hosabettu | 82 |
| 2 | 12 | 47 |
| | 13 | 0 |
| | 14 | 21 |
| | 15 | 250 |
| | 16 | 297 |
| | 17 | 52 |
| | 18 | 55 |
| | 19 | 405 |
| | 36 | 113 |
| | Airport Road | 368 |
| 3 | 23 | 116 |
| | 24 | 241 |
| | 25 | 107 |
| | 26 | 133 |
| | 27 | 280 |
| | 28 | 120 |
| | 29 | 6 |
| | 30 | 543 |
| | 31 | 7 |
| | 39 | 545 |
| | 40 | 162 |
| | 41 | 16 |
| | 42 | 287 |

| Zone | Ward No. | No.of LED street lights installed |
|---|---|---|
| 4 | 43 | 128 |
| | 44 | 4 |
| | 45 | 23 |
| | 46 | 74 |
| | 47 | 28 |
| | 55 | 15 |
| | 56 | 615 |
| | 57 | 578 |
| | 58 | 54 |
| 5 | 20 | 45 |
| | 21 | 99 |
| | 22 | 124 |
| | 32 | 258 |
| | 33 | 71 |
| | 34 | 61 |
| | 35 | 87 |
| | 37 | 208 |
| | 38 | 50 |
| 6 | 48 | 447 |
| | 49 | 381 |
| | 50 | 21 |
| | 51 | 1 |
| | 52 | 75 |
| | 53 | 69 |
| | 54 | 0 |
| | 59 | 507 |
| | **Total Lights** | 16392 |